ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/06/ಇಸಿಎಸ್(1)/2023

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-560001
ದಿನಾಂಕ: 02.02.2024

**ಸುತ್ತೋಲೆ**

ವಿಷಯ: ಡಿಸೆಂಬರ್ 2023 ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷಾ ಫಲಿತಾಂಶದಲ್ಲಿ ಆಂತರಿಕ ಅಂಕಗಳು ಪ್ರಕಟವಾಗದಿದ್ದಲ್ಲಿ ಮಂಡಳಿಯಲ್ಲಿ Update ಮಾಡಲು ಸಂಸ್ಥೆಗಳು ಅನುಸರಿಸಬೇಕಾದ ಕ್ರಮಗಳ ಕುರಿತು.

ಉಲ್ಲೇಖ: 1.ಈ ಕಛೇರಿ ಸುತ್ತೋಲೆ ಸಂಖ್ಯೆ:ಬಿಟಿಇ/05/ಇಎಫ್/2023 ದಿ:25.01.2024
2.ಈ ಕಛೇರಿ ಸುತ್ತೋಲೆ ಸಂಖ್ಯೆ:ಬಿಟಿಇ/09/ಇಸಿಎಸ್(2)2023 ದಿ:01.02.2024
3.ಈ ಕಛೇರಿ ಜ್ಞಾಪನ ಸಂಖ್ಯೆ:ಬಿಟಿಇ/06/ಇಸಿಎಸ್(1)2023 ದಿ:03.11.2023
4.ಸರ್ಕಾರದ ಆದೇಶ ಸಂಖ್ಯೆ: ಇಡಿ 57 ಟಿಪಿಇ 2013 ದಿನಾಂಕ:17.4.2015

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಸುತ್ತೋಲೆಯನ್ವಯ ಡಿಸೆಂಬರ್ 2023 ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಯ ಫಲಿತಾಂಶವನ್ನು ದಿನಾಂಕ:29.01.2024 ರಂದು ಪ್ರಕಟಿಸಲಾಗಿದ್ದು, ಉಲ್ಲೇಖ (2) ರ ಜ್ಞಾಪನದಲ್ಲಿ ವಿದ್ಯಾರ್ಥಿಗಳ ಪ್ರಕಟಿತ ಫಲಿತಾಂಶವನ್ನು ಸಂಬಂಧಪಟ್ಟ ಸಂಸ್ಥೆಗಳ ಪ್ರಾಂಶುಪಾಲರುಗಳು ಮತ್ತು ವಿಭಾಗಾಧಿಕಾರಿಗಳು ಕೂಲಂಕಷವಾಗಿ ಪರಿಶೀಲಿಸುವಂತೆ ತಿಳಿಸಲಾಗಿದೆ.

ಮುಂದುವರೆದು ಫಲಿತಾಂಶಗಳಲ್ಲಿ ಸಂಸ್ಥೆಗಳ ಲೋಪದಿಂದ ಯಾವುದೇ ವಿದ್ಯಾರ್ಥಿ/ಗಳ ಆಂತರಿಕ ಅಂಕಗಳು ಫಲಿತಾಂಶದಲ್ಲಿ ಪ್ರತಿಬಿಂಬಿತವಾಗಿಲ್ಲದಿದ್ದ ಪಕ್ಷದಲ್ಲಿ ಸದರಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮಂಡಳಿಯಲ್ಲಿ Update ಮಾಡಲು ಸಂಸ್ಥೆಯ ಪ್ರಾಚಾರ್ಯರಿಂದ ವಿವರವಾದ ಲಿಖಿತ ಪತ್ರ ಮತ್ತು ಈ ಕೆಳಕಂಡ ಮೂಲ & ದೃಢೀಕೃತ ದಾಖಲೆಗಳೊಂದಿಗೆ ತಾಂತ್ರಿಕ ಪರೀಕ್ಷಾ ಮಂಡಳಿಯ ಕಛೇರಿಯನ್ನು ದಿನಾಂಕ:12.02.2024ರೊಳಗೆ ಸಂಪರ್ಕಿಸಲು ತಿಳಿಸಲಾಗಿದೆ.

1. **ಸಂಸ್ಥೆಯ ಮೂಲ ಆಂತರಿಕ ಅಂಕಗಳ ರಿಜಿಸ್ಟರ್ ಮತ್ತು ಚೆಕ್‌ಲಿಸ್ಟ್:** ರಿಜಿಸ್ಟರ್‌ನಲ್ಲಿನ ಸಂಬಂಧಪಟ್ಟ ಎಲ್ಲಾ ಪುಟಗಳಲ್ಲಿಯೂ ಸಂಬಂಧಪಟ್ಟ ಉಪನ್ಯಾಸಕರು/ವಿಭಾಗಾಧಿಕಾರಿ/ಪ್ರಾಂಶುಪಾಲರು ದೃಢೀಕರಿಸಿರಬೇಕು ಹಾಗೂ ಪರಿವೀಕ್ಷಕರು ಎಲ್ಲಾ ಪುಟಗಳಲ್ಲಿಯೂ ಪೂರ್ಣ ಸಹಿ ಮಾಡಿ ಕೊನೆಯ ಪುಟದಲ್ಲಿ ಪ್ರಿನ್ಸಿಪಾಲರು & ಆಂತರಿಕ ಅಂಕಗಳ ಪರಿವೀಕ್ಷಕರು ಉಲ್ಲೇಖ (3) ರ ಜ್ಞಾಪನದಲ್ಲಿ ಸೂಚಿಸಿರುವಂತೆ ದೃಢೀಕರಿಸಿರಬೇಕು.
2. ಫಲಿತಾಂಶದಲ್ಲಿ ಆಂತರಿಕ ಅಂಕಗಳು ಪ್ರತಿಬಿಂಬಿತವಾಗಿಲ್ಲದ ವಿದ್ಯಾರ್ಥಿಯ ಸೆಮಿಸ್ಟರ್‌ನ ಆಂತರಿಕ ಅಂಕಗಳ ಮೂಲ ವಹಿಯ ದೃಢೀಕೃತ ಫೋಟೋ ಪ್ರತಿ (ಪೂರ್ಣ ಸೆಮಿಸ್ಟರ್‌ನ ದೃಢೀಕೃತ ಪ್ರತಿ) ಮತ್ತು ಚೆಕ್‌ಲಿಸ್ಟ್‌ನ ದೃಢೀಕೃತ ಪ್ರತಿಗಳನ್ನು ಪತ್ರದೊಂದಿಗೆ ಲಗತ್ತಿಸುವುದು.

ಆಂತರಿಕ ಅಂಕಗಳನ್ನು ಸಂಸ್ಥೆಗಳಲ್ಲಿ ಸರಿಯಾಗಿ Upload ಮಾಡದೆ ಲೋಪವೆಸಗಿದ್ದಲ್ಲಿ ಉಲ್ಲೇಖ(4) ರ ಸರ್ಕಾರಿ ಆದೇಶದ ಪ್ರಕಾರ K2 ಮುಖಾಂತರ ನಿಗದಿತ ದಂಡ ಪಾವತಿಸಿ ಚಲನ್ ಪ್ರತಿಯನ್ನು ಮಂಡಳಿಗೆ ಸಲ್ಲಿಸುವುದು.

ದಿನಾಂಕ: 12.02.2024ರ ನಂತರ ಆಂತರಿಕ ಅಂಕಗಳ Update/ ತಿದ್ದುಪಡಿ ಮನವಿಗಳನ್ನು ಸ್ವೀಕರಿಸಲಾಗುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ ಮತ್ತು ಮುಂದಿನ ಆಗುಹೋಗುಗಳಿಗೆ ಸಂಸ್ಥೆಗಳ ಪ್ರಾಚಾರ್ಯರುಗಳೇ ನೇರ ಜವಾಬ್ದಾರಾಗಿರುತ್ತಾರೆಂದು ತಿಳಿಸಲಾಗಿದೆ.

ಕಾರ್ಯದರ್ಶಿ

ಇವರಿಗೆ,

ರಾಜ್ಯದಲ್ಲಿನ ಎಲ್ಲಾ ಸರ್ಕಾರಿ/ಖಾಸಗಿ ಅನುದಾನಿತ/ ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ – ಮುಂದಿನ ಕ್ರಮಕ್ಕಾಗಿ

ಪ್ರತಿ:

1. ಉಪನಿರ್ದೇಶಕರು, ತಾಂ.ಪಂ.ಮಂ. – ಮಾಹಿತಿಗಾಗಿ
2. ಸಹಾಯಕ ನಿರ್ದೇಶಕರು, ತಾಂ.ಪಂ.ಮಂ. – ಮಾಹಿತಿಗಾಗಿ
3. ಶ್ರೀ ಹರೀಶ ಶೆಟ್ಟಿ, ಪ್ರಿನ್ಸಿಪಾಲರು, ಕರ್ನಾಟಕ (ಸ) ಪಾಲಿಟೆಕ್ನಿಕ್, ಮಂಗಳೂರು– ಮಾಹಿತಿಗಾಗಿ
4. ಹಿರಿಯ ತಾಂತ್ರಿಕ ಸಹಾಯಕರುಗಳು/ ತಾಂತ್ರಿಕ ಸಹಾಯಕರುಗಳು ತಾಂ.ಪಂ.ಮಂ.–ಮಾಹಿತಿ & ಅಗತ್ಯಕ್ರಮಕ್ಕಾಗಿ
5. ರಿಜಿಸ್ಟ್ರಾರ್ (ಪರೀಕ್ಷೆ) ತಾಂ.ಪಂ.ಮಂ. – ಮಾಹಿತಿಗಾಗಿ
6. ಆರ್.ಡಿ.ಎಂ. ವಿಭಾಗದ ಕಛೇರಿ ಅಧೀಕ್ಷಕರುಗಳು ಮತ್ತು ಕಾರ್ಯ ನಿರ್ವಾಹಕರುಗಳಿಗೆ–ಮಾಹಿತಿ& ಅಗತ್ಯಕ್ರಮಕ್ಕಾಗಿ
7. ಇ-ಆಡಳಿತ – ವೆಬ್ ಸೈಟ್‌ನಲ್ಲಿ ಪ್ರಕಟಿಸಲು
8. ಗಣಕ ಕೇಂದ್ರ– ವೆಬ್‌ಪೋರ್ಟಲ್ ನಲ್ಲಿ ಪ್ರಕಟಿಸಲು